# ನಟನೆಯ ದಾರಿ, ಬರವಣಿಗೆ ಅಚ್ಚರಿ!



ಮಂಜು ಮಾಂಡವ್ಯ ಕನ್ನಡ ಚಿತ್ರರಂಗದ ಪ್ರತಿಭಾವಂತ ಬರಹಗಾರರಲ್ಲೊಬ್ಬರು. 'ಮಾಸ್ಟರ್ ಪೀಸ್' ಚಿತ್ರದ ಮೂಲಕ ನಿರ್ದೇಶಕನಾಗಿ ಗುರ್ತಿಸಿಕೊಂಡವರು. 'ಭರತ ಬಾಹುಬಲಿ' ಸಿನಿಮಾದ ಮೂಲಕ ನಾಯಕನಾಗಿರುವ ಅವರೊಂದಿಗಿನ ಮಾತುಕತೆಯ ಮುಖ್ಯಾಂಶಗಳು ಇಲ್ಲಿವೆ.

■ ರಘು



★ ಬರಹಗಾರರಾಗಿದ್ದ ನೀವು ನಿರ್ದೇಶಕರಾದುದು ವೃತ್ತಿಯಲ್ಲಿನ ಬಡ್ತಿಯಂತೆ ಕಾಣಿಸಿತ್ತು. ಈಗ ನಾಯಕನಟನಾಗುವ ಮೂಲಕ ಅಚ್ಚರಿ ನೀಡುತ್ತಿದ್ದೀರಿ?

ನನಗೆ ಹಾಗನ್ನಿಸುತ್ತಿಲ್ಲ. ನನ್ನ ಮಟ್ಟಿಗೆ ಬರವಣಿಗೆಯೇ ಅಚ್ಚರಿ, ಅನಿರೀಕ್ಷಿತ. ಕಾಲೇಜು ದಿನಗಳಲ್ಲಿಯೇ 'ಪ್ರೇಮ' ಎನ್ನುವ ಸಿನಿಮಾದಲ್ಲಿ ನಟಿಸಿದ್ದೆ. ನಾನು ರಂಗಭೂಮಿಯಿಂದ ಬಂದವನು. ಅಲ್ಲಿ ನಟನೆಯ ಜೊತೆಗೆ ನಿರ್ದೇಶನವನ್ನೂ ಮಾಡುತ್ತಿದ್ದೆ. ಬರವಣಿಗೆ ಅನಿವಾರ್ಯ ಅನ್ನಿಸಿದ್ದು ಟಿ.ಎನ್. ಸೀತಾರಾಮ್ ಅವರ ಬಳಗ ಸೇರಿಕೊಂಡ ಮೇಲೆ. ಅವರ ಧಾರಾವಾಹಿ ಬಳಗದಲ್ಲಿ 'ಬರವಣಿಗೆ ಗೊತ್ತಿದ್ದರಷ್ಟೇ ಕೆಲಸ' ಎನ್ನುವ ಷರತ್ತಿನಿಂದಾಗಿ ಬರವಣಿಗೆಯಲ್ಲಿ ತೊಡಗಿಕೊಂಡೆ.

ಕಾಲೇಜು ದಿನಗಳ ನಂತರ ಸಿನಿಮಾಗಳಲ್ಲಿ ಅವಕಾಶ ಹುಡುಕಲು ಶುರು ಮಾಡಿದಾಗ ಬರವಣಿಗೆ ನೆರವಿಗೆ ಬಂತು. ಬರವಣಿಗೆಯಲ್ಲೇ ಹೆಸರು–ಹಣ ದೊರೆಯುತ್ತಿದ್ದರೂ ಆ ಕಂಫರ್ಟ್ ಜೋನ್‌ನಿಂದ ತಪ್ಪಿಸಿಕೊಳ್ಳಬೇಕು ಎಂದು ಸದಾ ಅನ್ನಿಸುತ್ತಿತ್ತು. 'ರಾಜಾ ಹುಲಿ' ಚಿತ್ರೀಕರಣದ ಸಂದರ್ಭದಲ್ಲಿ ಯಶ್ ಅವರ ಪರಿಚಯವಾಗಿ, 'ಮಾಸ್ಟರ್ ಪೀಸ್' ಸಿನಿಮಾದ ಯೋಜನೆ ಚಿಗುರೊಡೆಯಿತು. 'ರಾಜಾ ಹುಲಿ'ಯಲ್ಲಿ ವಿಲನ್ ಪಾತ್ರದಲ್ಲಿ ನಟಿಸಿದ್ದೆ.

★ 'ಮಾಸ್ಟರ್ ಪೀಸ್' ನಂತರ ಇದ್ದಕ್ಕಿದ್ದಂತೆ ಮೌನವಾದಿರಿ. ಏಕೆ?

ದೊಡ್ಡದೊಂದು ಸಿನಿಮಾ ಮಾಡಿದ ನಂತರ ಅಂತಹ ಚಿತ್ರಗಳನ್ನೇ ರೂಪಿಸುವ ಒತ್ತಡ ಎದುರಾಯಿತು. ನನಗೆ ಸಿಕ್ಕ ನಿರ್ಮಾಪಕರೆಲ್ಲರೂ 'ಯಾವ ನಾಯಕನ ಡೇಟ್ಸ್ ಇದೆ' ಎಂದು ಕೇಳುತ್ತಿದ್ದರು. ದುರದೃಷ್ಟಕ್ಕೆ ಆ ಸಮಯದಲ್ಲಿ ಯಾವ ಜನಪ್ರಿಯ ನಾಯಕನಟರ ಡೇಟ್ಸ್ ಕೂಡ ದೊರೆಯಲಿಲ್ಲ. ಉಪೇಂದ್ರ ಅವರ 50ನೇ ಚಿತ್ರವನ್ನು ನಿರ್ದೇಶಿಸಬೇಕಾಗಿತ್ತು. ಅವರು ರಾಜಕಾರಣದತ್ತ ಮುಖ ಮಾಡಿದ್ದರಿಂದಾಗಿ ಆ ಸಿನಿಮಾ ಸೆಟ್ಟೇರಲಿಲ್ಲ. ಹೀಗೆ ಒಂದಷ್ಟು ಸಮಯ ಕಳೆದುಹೋದ ನಂತರ, ನಾನೇ ನಟಿಸುವ ತೀರ್ಮಾನ ಕೈಗೊಂಡೆ. 'ಮಾಸ್ಟರ್ ಪೀಸ್' ಸಂದರ್ಭದಲ್ಲೇ 'ಭರತ ಬಾಹುಬಲಿ'ಯ ಕಥೆ ಹೊಳೆದಿತ್ತು, ಅದನ್ನು ಚಿಕ್ಕಣ್ಣನವರೊಂದಿಗೆ ಚರ್ಚಿಸಿದ್ದೆ.

★ 'ಭರತ ಬಾಹುಬಲಿ' ಯಾವ ಬಗೆಯ ಸಿನಿಮಾ?

'ಮಾಸ್ಟರ್ ಪೀಸ್' ಚಿತ್ರದಲ್ಲಿ ಇರುವಂತೆ ಈ ಸಿನಿಮಾದಲ್ಲಿ ಹೀರೊಯಿಸಂ ಇಲ್ಲ. ಇಂದಿನ ತಲೆಮಾರಿನಲ್ಲಿ ತ್ಯಾಗದ ಪ್ರಮಾಣ ಎಷ್ಟರಮಟ್ಟಿಗಿದೆ ಎನ್ನುವುದರ ವಿಶ್ಲೇಷಣೆ ಚಿತ್ರದಲ್ಲಿದೆ. ರೈತರ ಮಕ್ಕಳು ರೈತರಾಗಿ ಉಳಿಯಲು ಬಯಸದ ಸಂದರ್ಭ ನನ್ನ ಸಿನಿಮಾದ ಭಿತ್ತಿಯಲ್ಲಿದೆ. ರೈತಾಪಿ ಮಂದಿ, ಇಂದಿನ ಯುವಮನಸ್ಸುಗಳು ಹಾಗೂ ಥ್ರಿಲ್ಲರ್ – ಈ ಮೂರು ಆಯಾಮಗಳಲ್ಲಿ ಸಾಗುವ ಸಿನಿಮಾದಲ್ಲಿ ಹ್ಯೂಮರ್ ಸಾಕಷ್ಟಿದೆ. ಭರತ–ಬಾಹುಬಲಿಯ ಆಶಯಗಳು ಚಿತ್ರಕಥೆಯಲ್ಲಿ ಅಂತರ್ಗತವಾಗಿವೆ. ಭರತನಾಗಿ ನಾನು, ಬಾಹುಬಲಿಯಾಗಿ ಚಿಕ್ಕಣ್ಣ ನಟಿಸಿದ್ದಾರೆ. ಸಾರಾ ಹರೀಶ್ ಎನ್ನುವ ರೂಪದರ್ಶಿ ಚಿತ್ರದ ನಾಯಕಿ. ಭವ್ಯಾ, ಶ್ರೀನಿವಾಸಮೂರ್ತಿ, ಅಚ್ಯುತ್‌ಕುಮಾರ್ ತಾರಾಗಣದಲ್ಲಿರುವ ಪ್ರಮುಖರು. 'ಆಪರೇಷನ್ ಅಲಮೇಲಮ್ಮ' ಖ್ಯಾತಿಯ ರಿಷಿ ಅತಿಥಿ ಪಾತ್ರದಲ್ಲಿದ್ದಾರೆ.

★ ನಟನೆ–ನಿರ್ದೇಶನ ಎರಡೂ ಪಾತ್ರ ನಿಮ್ಮದೇ ಆದಾಗ ಅನುಕೂಲವೇನಾದರೂ ಇದೆಯೇ?

ಎರಡೂ ಜವಾಬ್ದಾರಿಗಳೂ ನನ್ನವೇ ಆಗಿದ್ದಾಗ ನನ್ನ ತಪ್ಪುಗಳು ನನಗೆ ಸುಲಭವಾಗಿ ಕಾಣಿಸುತ್ತಿದ್ದವು. ಆದರೆ, ನಟನೆ–ನಿರ್ದೇಶನ ಎರಡನ್ನೂ ಒಟ್ಟಿಗೆ ತೂಗಿಸುವುದು ಶ್ರಮದಾಯಕ ಕೆಲಸ. ಬೆಳಿಗ್ಗೆ ಹಾಕಿದ ಮೇಕಪ್ ಅನ್ನು ಕೆಲವೊಮ್ಮೆ ರಾತ್ರಿ 1ಕ್ಕೆ ತೆಗೆದದ್ದೂ ಇದೆ. ಆದರೆ ಇಷ್ಟಪಟ್ಟು ಮಾಡುತ್ತಿದ್ದ ಕೆಲಸ ಕಷ್ಟವೆನ್ನಿಸಲಿಲ್ಲ.

★ ನಟನೆಯ ನಂತರ ಮುಂದೇನು? ಮತ್ತೆ ನಿರ್ದೇಶನಕ್ಕೆ ಮರಳುವಿರಾ?

ಸಿನಿಮಾದ ಫಲಿತಾಂಶ ನನ್ನ ಮುಂದಿನ ದಾರಿಯನ್ನು ನಿರ್ಧರಿಸುತ್ತದೆ. ಡಿಸೆಂಬರ್‌ನಲ್ಲಿ ಸಿನಿಮಾ ತೆರೆಕಾಣಬಹುದು. ನಿರ್ದೇಶನದ ಅವಕಾಶ ಮುಕ್ತವಾಗಿದೆ. ನಟನಾಗಿ ಮುಂದುವರೆಯುವುದು ನಿರ್ಮಾಪಕರು ಮತ್ತು ಪ್ರೇಕ್ಷಕರು ನನ್ನನ್ನು ಕಲಾವಿದನಾಗಿ ಹೇಗೆ ಸ್ವೀಕರಿಸುತ್ತಾರೆ ಎನ್ನುವುದನ್ನು ಅವಲಂಬಿಸಿದೆ. ■